OS 6/2022

PW 1

**ದಿಃ 03.03.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ 1 ರಿಂದ 3 ನೇ ಪ್ರತಿವಾದಿ ಪರ ವಕೀಲರಾದ ಶ್ರೀ ಎಸ ಎಸ ಅಂಗಡಿರವರಿಂದ**

ದಿಃ01-01-2005 ರಿಂದ ನನಗೆ ಅದೇ ಮನೆಯಲ್ಲಿ ಇರಲು ವಿ ಎಚ ಬ್ಯಾಳಿರವರು ನನಗೆ ಅನುಮತಿ ಕೊಟ್ಟರು ಎಂದರೆ ಸಾಕ್ಷಿ 2000 ನೇ ಇಸ್ವಿಯಲ್ಲಿ ಜುನನಲ್ಲಿ ನನ್ನ ಮಗಳ ಜನನವಾಗಿದ್ದು ಆ ನಂತರ 6 ತಿಂಗಳ ಆದ ಮೇಲೆ ನಾವು ಆ ಮನೆಗೆ ಬಂದೇವು ಎನ್ನುತ್ತಾರೆ. ದಿಃ01-01-2005 ರಂದು ನನಗೆ ಮನೆಯಲ್ಲಿ ಇರಲು ಅನುಮತಿ ಕೊಟ್ಟರು ಎಂದು ನಾನು ಸೂಚಿಸಿದ್ದು ಅದಕ್ಕೆ ಸಂಬಂಧಿಸಿದಂತೆ ಒಂದು ಆಗ್ರಿಮೆಂಟ ಇದೆ ನೋಡಿ ಎಂದರೆ ಸಾಕ್ಷಿ ಆ ದಾಖಲೆಯನ್ನು ನೋಡಿ ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ದಾಖಲೆಯಲ್ಲಿ ನನ್ನ ಮಾವ ಶರಣ ಬ್ಯಾಳಿರವರ ಸಹಿ ಇದೆ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ.

ನನಗೆ ಈ ಬಗ್ಗೆ ಗೊತ್ತಿದ್ದರು ಕೂಡಾ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸಾಕ್ಷಿ ಹೆಣ್ಣು ಮಕ್ಕಳಿಗೆ ಎನು ಹೇಳಿರುವುದಿಲ್ಲ, ಆ ಕಾರಣಕ್ಕೆ ಅದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ದಿಃ01-01-2005 ರಂದು ಮನೆ ಕೊಟ್ಟ ಬಗ್ಗೆ ಹಾಗೂ ಆ ಮನೆಯಲ್ಲಿ ಇರುವ ಎಲ್ಲ ವಸ್ತುಗಳು ಯಾವ ಕಂಡಿಷನನಲ್ಲಿ ಇದೇಯೋ ಅದೇ ರೀತಿ ಅದನ್ನು ವಾಪಸ್ಸು ಮಾಡಬೇಕೆಂದು ದಿಃ02-01-2005 ರಂದು ನನ್ನ ಯಜಮಾನರು ಹಾಗೂ ನನ್ನ ಮಾವನ ನಡುವೆ ಒಂದು ಆಗ್ರಿಮೆಂಟ ಆಯಿತು ಎಂದರೆ ಸಾಕ್ಷಿ ಅದು ಸುಳ್ಳು ಎನ್ನುತ್ತಾರೆ. ಸದರಿ ದಾಖಲೆಯಲ್ಲಿ ಸದರಿ ಆಸ್ತಿ ತಮ್ಮ ಸ್ವಯಾರ್ಜಿತ ಆಸ್ತಿ ಹಾಗೂ ಅದರಲ್ಲಿ ನನ್ನ ಗಂಡನಿಗೆ ಮತ್ತು ನಮಗೆ ಯಾವುದೇ ಹಕ್ಕು ಹಿತಾಸ್ತಕಿ ಇಲ್ಲವೆಂದು ಬರೆಯಲಾಗಿದೆ ಎಂದರೆ ಸಾಕ್ಷಿ ಅದು ಸುಳ್ಳು ಅವರಿಬ್ಬರು ತಂದೆ ಮಕ್ಕಳು ಎಂದು ನುಡಿಯುತ್ತಾರೆ. ನನ್ನ ಯಜಮಾನರು ಮನೆತನ ಹಾಳು ಮಾಡುತ್ತಾನೆಂಬ ಕಾರಣಕ್ಕೆ ಕೇವಲ ಇರಲು ಮನೆಯನ್ನು ಮಾತ್ರ ಕೊಟ್ಟಿದ್ದರು ಎಂದರೆ ಅದು ಸುಳ್ಳು ಎಂದು ಸಾಕ್ಷಿ ನುಡಿಯುತ್ತಾರೆ. ನಿಶಾನೆ ಪಿ 1 ರಿಂದ ನಿಶಾನೆ ಪಿ 12 ದಾಖಲೆಗಳನ್ನು ಹಾಜರುಪಡಿಸಿದ್ದು ಅವುಗಳ ಬಗ್ಗೆ ನಿಮಗೆ ಮಾಹಿತಿ ಇದೇಯಾ ಎಂದರೆ ಸಾಕ್ಷಿ ಇದೆ ಎನ್ನುತ್ತಾರೆ.

ನಿಶಾನೆ ಪಿ 9 ಹಾಜರುಪಡಿಸಿದ್ದು ಅದರಲ್ಲಿರುವ ವಿಚಾರಗಳನ್ನು ನಾನು ಓದಿ ತಿಳಿದಿದ್ದೇನೆಂದರೆ ಸರಿ. ಸಾಕ್ಷಿಗೆ ಈ ಹಂತದಲ್ಲಿ ಟೈಪ್ಡ ವೀಲ್ ಎಂಬುವುದಾಗಿ ದಾಖಲೆಯನ್ನು ತೋರಿಸಿದಾಗ ಸಾಕ್ಷಿ ಅದನ್ನು ನೋಡಿ typed will ನೇ ನಾನು ಸುಳ್ಳು ಎಂದು ಹೇಳುತ್ತಿರುವುದು ಎನ್ನುತ್ತಾರೆ. ನಿಶಾನೆ ಪಿ 9 ಸುಳ್ಳು ಎನ್ನುತ್ತೀರಾ ಅಥವಾ typed will ಸುಳ್ಳು ಎನ್ನುತ್ತೀರಾ ಎಂದರೆ ಸಾಕ್ಷಿ ನಿಶಾನೆ ಪಿ 9 ಸುಳ್ಳು ಇರುವ ಕಾರಣಕ್ಕೆ ಹಾಜರುಪಡಿಸಿರುತ್ತೇನೆ ಎನ್ನುತ್ತಾರೆ. ನಿಶಾನೆ ಪಿ 9 ನ್ನು ಎಲ್ಲಿಂದ ತಂದೀರಿ ಎಂದರೆ ಸಾಕ್ಷಿ ಅದನ್ನು ನಮ್ಮ ಮಾವ ತೆಗೆಯಿಸಿದ್ದು ಅವರನ್ನು ಕೇಳಿ ಹೇಳುತ್ತೇನೆ ಎನ್ನುತ್ತಾರೆ. ಸದರಿ ದಾಖಲೆಯನ್ನು ಎಲ್ಲಿಂದ ತಂದೀರಿ ಎಂದರೆ ಸಾಕ್ಷಿ ಅದು ನಮ್ಮ ಮಾವ ತೆಗೆಯಿಸಿದ್ದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಎಲ್ಲ ಕಾಗದ ಪತ್ರಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಎಲ್ಲಿಂದ ತೆಗೆಯಿಸಿದ್ದಾರೆಂದು ನನಗೆ ಗೊತ್ತಿಲ್ಲವೆಂದರೆ ಸರಿ. ವಕೀಲರಿಗೆ ಸದರಿ ದಾಖಲೆಗಳನ್ನು ನಾನು ಮತ್ತು ನನ್ನ ಮಾವ ಕೂಡಿ ಹೋಗಿಯೇ ಕೊಟ್ಟಿರುತ್ತೇವೆ. ನನ್ನ ಮಾವ ಎಂದರೆ ಸೋಮಶೇಖರ ಒಡ್ಡಕ್ಕಣ್ಣನವರ. ನಿಮ್ಮ ಮಾವ ಇವರನ್ನು ಈ ಕೇಸನಲ್ಲಿ ಸಾಕ್ಷಿ ಮಾಡಿಸುತ್ತೀರಾ ಎಂದರೆ ಸಾಕ್ಷಿ ಮಾಡಿಸುತ್ತೇನೆ ಎನ್ನುತ್ತಾರೆ.

ನಿಶಾನೆ ಪಿ 9 ದಾಖಲೆಯ ಬಗ್ಗೆ ನಿಮಗೆ ಯಾವಾಗ ತಿಳಿಯಿತು ಎಂದರೆ ಸಾಕ್ಷಿ 2022 ರಲ್ಲಿ ಎನ್ನುತ್ತಾರೆ. ನನ್ನ ಮಾವ ವಿ ಎಚ ಬ್ಯಾಳಿ ಇವರು B.A.LL.B ಮಾಡಿದ್ದರು. ನನ್ನ ಮಾವ ವಿ ಎಚ ಬ್ಯಾಳಿ ಇವರು ನಿಶಾನೆ ಪಿ 9 ರಲ್ಲಿ Family members, his health condition, his earnings, list of immovables, list of movables, cash balance, FD receipt, share certificates, Bank lockers, future earnings ಇವುಗಳ ಬಗ್ಗೆ ಬರೆದಿದ್ದಾರೆಂದರೆ ಸಾಕ್ಷಿ ಹೌದು ಎನ್ನುತ್ತಾರೆ. ನಾನು ಕೇವಲ list of immovables ಬಗ್ಗೆ ಮಾತ್ರ ಹಿಸ್ಸೆ ಕೇಳಿರುತ್ತೇನೆ ಎಂದರೆ ಸಾಕ್ಷಿ ಹೌದು ಉಳಿದವುಗಳನ್ನು ಬಿಟ್ಟಿರುತ್ತೇನೆ ಎನ್ನುತ್ತಾರೆ. ಉಳಿದವುಗಳ ಬಗ್ಗೆ ಕೇಳಲು ತೊಂದರೆ ಇತ್ತಾ ಎಂದರೆ ಸಾಕ್ಷಿ ನನಗೆ ಎಷ್ಟು ಇದೆ ಎಂಬುವುದು ಗೊತ್ತಿರಲಿಲ್ಲ ಎನ್ನುತ್ತಾರೆ. ವಿ ಎಚ ಬ್ಯಾಳಿ ಇವರು ದಿಃ25-08-2008 ರಂದು ಮರಣ ಹೊಂದಿದರು ಎಂದರೆ ಸರಿ. 2008 ರಿಂದ 2022 ರವರೆಗೆ ನನ್ನ ಮನೆಯವರು ಇದ್ದಾಗಲಾಗಲಿ ಯಾರು ಪ್ರಶ್ನೆ ಮಾಡಿಲ್ಲವೆಂದರೆ ಸರಿ. ನನ್ನ ಯಜಮಾನರು ದಿಃ02-05-2021 ಕ್ಕೆ ಮರಣ ಹೊಂದಿದರು ಎಂದರೆ ಸರಿ. ವಿ ಎಚ ಬ್ಯಾಳಿ ಅಂದರೆ ನನ್ನ ಮಾವ ಮರಣ ಹೊಂದಿದ ನಂತರ ಪ್ರಾಪರ್ಟಿ ನಂಬರ 1 ಇದು ಪ್ರತಿವಾದಿ 1 ರವರ ಹೆಸರಿಗೆ ವರ್ಗಾವಣೆಯಾಯಿತು ಎಂದರೆ ಸಾಕ್ಷಿ ಅದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸದರಿ ಆಸ್ತಿ ಈಗ ಯಾರ ಹೆಸರಿನಲ್ಲಿ ಇದೆ ಎಂದು ಗೊತ್ತಿದೇಯಾ ಎಂದರೆ ಸಾಕ್ಷಿ ನನ್ನ ಅತ್ತೆ ಹೆಸರನಲ್ಲಿ ಇದಿದ್ದನ್ನು ದೊಡ್ಡ ಮಗನ ಹೆಸರಿಗೆ ಮಾಡಿದ್ದಕ್ಕೆ ನಾನು ಕೇಸು ದಾಖಲಿಸಿದ್ದೇನೆ ಎನ್ನುತ್ತಾರೆ. ನನ್ನ ಮಾವ ವಿ ಎಚ ಬ್ಯಾಳಿ ಇವರಿಂದ ನನ್ನ ಅತ್ತೆ ಪ್ರತಿವಾದಿ ನಂಬರ 1 ರವರ ಹೆಸರಿಗೆ ಆಸ್ತಿ ವರ್ಗಾವಣೆ ಆಗಬೇಕಾದರೆ ನನ್ನ ಗಂಡ ಜೀವಂತ ಇದ್ದರು ಎಂದರೆ ಸರಿ. ವೀಲ್ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದ್ದರು ಸಹ ಹಾಗೂ ದೊಡ್ಡ ಮಗನಿಗೆ ಒಂದು ಆಸ್ತಿ ಮತ್ತು ಚಿಕ್ಕ ಮಗನಿಗೂ ಆಸ್ತಿ ಕೊಟ್ಟರು ಕೂಡಾ ಆಸ್ತಿ ಹೊಡೆಯಬೇಕೆಂಬ ಉದ್ದೇಶದಿಂದ ನಾನು ಈ ಸುಳ್ಳು ಕೇಸು ದಾಖಲಿಸಿದ್ದೇನೆಂದರೆ ಸರಿಯಲ್ಲ.

ವಿ ಎಚ ಬ್ಯಾಳಿ ಇವರಿಗೆ ಹಾರ್ಟ ಸರ್ಜರಿ, ಹರಣೀಯಾ ಆಗಿದ್ದು, ಶುಗರ್, ಬಿಪಿ ಇದ್ದರು ಕೂಡಾ ಅವರು ಸಂಪೂರ್ಣ ತಮ್ಮ ಸೇವೆಯನ್ನು ನಿರ್ವಹಿಸಿ ತಮ್ಮ ವೃತ್ತಿಯಿಂದ ದಿಃ31-05-1996 ರಲ್ಲಿ ನಿವೃತ್ತರಾದರು ಎಂದರೆ ಸಾಕ್ಷಿ ಆಗ ನನ್ನ ಮದುವೆ ಇನ್ನು ಆಗಿರಲಿಲ್ಲ ಆದರೆ ಸ್ವ ಇಚ್ಛೆಯಿಂದ ನಿವೃತ್ತಿ ತೆಗೆದುಕೊಂಡಿದ್ದಾರೆಂದು ಕೇಳಿದ್ದೆ ಎಂದು ನುಡಿಯುತ್ತಾರೆ. ನನ್ನ ಮಾವ ಸ್ವಯಂ ನಿವೃತ್ತಿ ತೆಗೆದುಕೊಂಡಿದ್ದಾರೆಂದು ಹೇಳಿದ್ದು ಈ ವಿಚಾರವನ್ನು ಯಾರ ಕಡೆಯಿಂದ ಕೇಳಿದ್ದೀರಿ ಎಂದರೆ ಸಾಕ್ಷಿ ನನ್ನ ಅತ್ತೆ ಹೇಳಿದ್ದರು ಎನ್ನುತ್ತಾರೆ. ನನ್ನ ಮಾವ ಸಂಪೂರ್ಣ ತಮ್ಮ ಸೇವೆ ಮುಗಿಸಿ ನಿವೃತ್ತರಾದರೂ ಕೂಡಾ ನಾನು ಸ್ವಯಂ ನಿವೃತ್ತಿ



ತೆಗೆದುಕೊಂಡಿದ್ದಾರೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸಾಕ್ಷಿ ನನಗೆ ಅದರ ಬಗ್ಗೆ ಅಷ್ಟಾಗಿ ಗೊತ್ತಿಲ್ಲ ಎನ್ನುತ್ತಾರೆ. ನಿವೃತ್ತಿಯಾದ ನಂತರ ವಿ ಎಚ ಬ್ಯಾಳಿರವರು ಹೈಜನ management

consultancy ನಲ್ಲಿ consultant ಆಗಿ ಕೆಲಸ ಮಾಡುತ್ತಿದ್ದರು ಎಂದರೆ ಸಾಕ್ಷಿ ಮಾಡುತ್ತಿದ್ದರು ಎನ್ನುತ್ತಾರೆ. ಅದೇ ರೀತಿ honorary teaching ಎಂಬುದಾಗಿ ಪ್ಯಾಕಲ್ಟಿಯಾಗಿ ಕೆಲಸ ನಿರ್ವಹಿಸುತ್ತಿದ್ದರು ಎಂದರೆ ಸಾಕ್ಷಿ ಸ್ವಲ್ಪ ದಿನ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ವಿ ಎಚ ಬ್ಯಾಳಿರವರು ಸುಮಾರು 69-70 ವರ್ಷಗಳವರೆಗೂ ಕೆಲಸ ನಿರ್ವಹಿಸಿದ್ದರು ಎಂದರೆ ಸಾಕ್ಷಿ ಮಾಡಿರುತ್ತಾರೆ ಎನ್ನುತ್ತಾರೆ. ಅವರು ಮರಣ ಹೊಂದುವವರೆಗೂ ಈ ಎಲ್ಲ ಕೆಲಸ ಮಾಡುತ್ತಿದುದ್ದರಿಂದ ಆರ್ಥಿಕವಾಗಿ ಸದೃಡ ಇದ್ದರು ಎಂದರೆ ಸರಿ. ವಿ ಎಚ ಬ್ಯಾಳಿರವರು ಇರುವವರೆಗೂ ಎಲ್ಲ ಆಸ್ತಿಗಳ ತೆರಿಗೆಯನ್ನು ತುಂಬುತ್ತಿದ್ದರು ಎಂದರೆ ಸಾಕ್ಷಿ ನನ್ನ ಮನೆಯವರು ಎಲ್ಲ ಸ್ಯಾಲರಿಯನ್ನು ಕೊಡುತ್ತಿದ್ದರು ಒಟ್ಟಿಗೆ ಎಲ್ಲರು ಕಟ್ಟುತ್ತಿದ್ದರು ಎಂದು ನುಡಿಯುತ್ತಾರೆ. ನನ್ನ ಮಾವ ನಿಶಾನೆ ಪಿ 9 ಆದ ನಂತರ 8 ವರ್ಷಗಳವರೆಗೂ ಬದುಕಿದ್ದರು ಎಂದರೆ ಸಾಕ್ಷಿ ಇರಬಹುದು ಎಂದು ನುಡಿಯುತ್ತಾರೆ.

(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು, ನೀಡಿ ಮುಂದುಡಲಾಯಿತು.)

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

1 ನೇ ಅಧಿಕ ಹಿ.ದಿ.ನ್ಯಾಹುಬ್ಬಳ್ಳಿ